# ಜಾತೀಯತೆ

ಜಾತಿಎನ್ನುವ ಪದವನ್ನುತನ್ನದೇಆದ ವಿಶಿಷ್ಟ ರೂಢಿಗಳು ಮತ್ತು ಸಂಪ್ರದಾಯಗಳನ್ನೊಳಗೊಂಡ ಒಂದು ಗುಂಪಿನ ಜನರನ್ನುಗುರುತಿಸಲು ಬಳಸುತ್ತೇವೆ. ಜಾತಿಪದ್ಧತಿಇಂದು ನಮ್ಮ ಸಾಮಾಜಿಕ ಪ್ರವಾಹದಲ್ಲಿ ನಡುಗಡ್ಡೆಯಾಗಿದೆ. ಭಾರತಒಂದುಜಾತ್ಯಾತೀತರಾಷ್ಟ್ರವೆಂದು ಹೇಳುವುದು ಹೆಸರಿಗೆ ಮಾತ್ರ.ಈ ಹಿನ್ನೆಲೆಯಲ್ಲಿಒಂದುಗಂಭೀರಚಿಂತನೆಅತ್ಯಗತ್ಯ.

ಜಾತಿಪದ್ಧತಿ ಅನೇಕ ವರ್ಷಗಳಿಂದ ಇರುವಒಂದು ಸಾಮಾಜಿಕ ಪಿಡುಗು. ಇದರ ಉಗಮ ಸರಿಯಾಗಿ ತಿಳಿದಿಲ್ಲ.ಆದ್ದರಿಂದಅದರ ಬಗ್ಗೆ ತಲೆಕೆಡಿಸಿಕೊಳ್ಳುವುದು ಅನಗತ್ಯ.ಆದರೆ ನಮ್ಮ ಮುಂದಿರುವ ಸವಾಲು ಅದನ್ನು ಹೋಗಲಾಡಿಸುವುದರ ಬಗೆಗಿನ ಚಿಂತನೆ.ಇದು ಆಳವಾಗಿ ಬೇರುಬಿಟ್ಟಿರುವುದರಿಂದಅದನ್ನು ಹೋಗಲಾಡಿಸುವುದು ಸುಲಭವಲ್ಲ.

ಪ್ರತಿಯೊಂದುಧರ್ಮದಲ್ಲೂ ಅನೇಕ ಜಾತಿಗಳಿವೆ.ಆದ್ದರಿಂದಒಂದುಧರ್ಮದ ಅನುಯಾಯಿಗಳು ತಮ್ಮ ಜಾತಿಗಳನ್ನು ಮರೆತುತಾವೆಲ್ಲರೂಒಂದುಧರ್ಮಕ್ಕೆ ಸೇರಿದ ಸಮಾನ ಮನಸ್ಕರೆಂದು ತಿಳಿದರೆ ಜಾತಿಪದ್ಧತಿಯ ಸಮಸ್ಯೆಕಡಿಮೆಯಾಗಬಹುದು.ಈ ನಿಟ್ಟಿನಲ್ಲಿ ಧರ್ಮಗುರುಗಳು ಚಿಂತನೆ ಮಾಡುವುದು ಒಳಿತು.ಏಕೆಂದರೆಅವರ ಅನುಯಾಯಿಗಳು ಅಥವಾ ಶಿಷ್ಯರು ಅವರ ಮಾತಿಗೆ ಬೆಲೆ ಕೊಡುತ್ತಾರೆ.

ಜಾತಿಯ ಸಮಸ್ಯೆ ಹೆಚ್ಚು ಗಂಭೀರ ಸ್ವರೂಪ ಪಡೆಯುವುದು ವೈವಾಹಿಕ ಸಂಬಂಧಗಳ ಸಂದರ್ಭದಲ್ಲಿ. ಜಾತಿಪದ್ಧತಿಯ ವಿರುದ್ಧ ಮಾತನಾಡುವಅನೇಕರುತಮ್ಮ ಮಕ್ಕಳ ಮದುವೆ ಮಾಡುವ ಸಂದರ್ಭದಲ್ಲಿ ಮೌನವಹಿಸುತ್ತಾರೆ. ಇದುಒಬ್ಬ ವ್ಯಕ್ತಿಯತತ್ವ ಹಾಗೂ ಸಿದ್ಧಾಂತಗಳನ್ನು ಪರೀಕ್ಷಿಸುವಕ್ಷಣ.ಅನೈತಿಕ ಸಂಬಂಧ ಹೊಂದುವಾಗಅಡ್ಡಬರದಜಾತಿ ಮದುವೆಯ ಮಾತು ಬಂದಾಗ ಭೂತದ ಹಾಗೆ ಅಡ್ಡ ಬಂದು ನಿಲ್ಲುತ್ತದೆ.

ಇಂದಿನ ಸಮಾಜದಲ್ಲಿಅಂತರ್ಜಾತೀಯ ವಿವಾಹಗಳು ಅನೇಕ.ಆದರೆಇಂತಹ ವಿವಾಹವಾದ ಎಷ್ಟು ದಂಪತಿಗಳು ನೆಮ್ಮದಿಯಜೀವನ ಸಾಗಿಸುತ್ತಿದ್ದಾರೆಎನ್ನುವುದು ಪ್ರಸ್ತುತ.ಏಕೆಂದರೆಅವರತಂದೆತಾಯಂದಿರುಇಂತಹ ವಿವಾಹವನ್ನು ಹೇಗೆ ಸ್ವೀಕರಿಸುತ್ತಾರೆ ಎನ್ನುವುದು ಮುಖ್ಯ.ಇನ್ನೊಂದು ವಿಷಯವೆಂದರೆ ನಮ್ಮಲ್ಲಿಇನ್ನೂಒಟ್ಟುಕುಟುಂಬ ಪದ್ಧತಿಜೀವಂತವಾಗಿದೆ.ಆದ್ದರಿಂದಕುಟುಂಬದಒಬ್ಬ ಸದಸ್ಯನ ಸಹಮತವಿಲ್ಲದಿದ್ದರೂ ಸಮಸ್ಯೆ ಪ್ರಾರಂಭವಾಗುತ್ತದೆ.ಅನೇಕ ಪೋಷಕರುಅಂತರ್ಜಾತೀಯ ವಿವಾಹಕ್ಕೆ ಒಪ್ಪಿಗೆ ಸೂಚಿಸದಿರಲು ನಮ್ಮ ಸಾಮಾಜಿಕಜೀವನ ವ್ಯವಸ್ಥೆಯೇಕಾರಣ.ಏಕೆಂದರೆ ಸಮಾಜಇಂತಹಕುಟುಂಬವನ್ನುಅಪರಾಧಿಯಂತೆ ನೋಡುತ್ತದೆ.ಇಲ್ಲಿ ಸಮಾಜವೆಂದರೆ ಬಂಧು-ಬಳಗ ಮತ್ತು ಪರಿಚಿತರು.ಇವರು ಹೆಚ್ಚಿನ ಸಂದರ್ಭಗಳಲ್ಲಿ ಒಂದೇಜಾತಿಯವರಾಗಿರುತ್ತಾರೆ.

ಇನ್ನೂಒಂದು ಹೆಜ್ಜೆ ಮುಂದೆ ಹೋಗಿ ಯೋಚಿಸಿದಾಗ ಅಂತರ್ಜಾತೀಯ ವಿವಾಹಿತರುಎದುರಿಸುವಇನ್ನೊಂದು ಸಮಸ್ಯೆ ನಮಗೆ ಕಾಣಿಸುತ್ತದೆ.ಇದು ಪ್ರಾರಂಭವಾಗುವುದುಇಂತಹ ದಂಪತಿಗಳಿಗೆ ಮಕ್ಕಳಾದಾಗ.ಮಕ್ಕಳಿಗೆ ಯಾವಜಾತಿಯ ಸಂಸ್ಕಾರಕೊಡಬೇಕು?ಅವರುಯಾವಜಾತಿಗೆ ಸೇರುತ್ತಾರೆ?ಧಾರ್ಮಿಕ ಹಾಗೂ ಶಾಸ್ತ್ರವಿಧಿಗಳಲ್ಲಿ ಯಾವ ಸಂಪ್ರದಾಯವನ್ನುಅವರು ರೂಢಿಸಿಕೊಳ್ಳಬೇಕು? ಯಾವಜಾತಿಯಆಹಾರ ಪದ್ಧತಿಯನ್ನುಅವರು ಅಳವಡಿಸಿಕೊಳ್ಳಬೇಕು?ಸರ್ಕಾರಿ ದಾಖಲಾತಿಗಳಲ್ಲಿ ಯಾವಜಾತಿಯನ್ನು ನಮೂದಿಸಬೇಕು?ಹೀಗೆ ಹತ್ತು ಹಲವು ಪ್ರಶ್ನೆಗಳು ಎದುರಾಗುತ್ತವೆ.

ಸಮಾಜ ಬದಲಾಗುತ್ತಿದೆ.ನಂಬಿಕೆಗಳು ಬದಲಾಗುತ್ತಿವೆ.ಜಾತೀಯತೆಕಡಿಮೆಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸರ್ಕಾರಜಾತೀಯ ಭಾವನೆಯನ್ನು ಹೆಚ್ಚುಸುತ್ತಿದೆ. ಹೇಗೆಂದರೆ, ಯಾವುದೇ ಫಾರಂಗಳನ್ನು ಭರ್ತಿಮಾಡಬೇಕಾದರೆಜಾತಿಯನ್ನು ನಮೂದಿಸಬೇಕಾಗುತ್ತದೆ. ನಮ್ಮದುಜಾತ್ಯಾತೀತರಾಷ್ಟ್ರವೆನ್ನುವ ಸರ್ಕಾರಜಾತಿಯನ್ನು ಕೇಳುವುದೇಕೆ?ಅದನ್ನುದಾಖಲಿಸುವುದೇಕೆ?ನಮ್ಮ ನ್ಯಾಯಾಲಯಗಳು ಕುರುಡಾಗಿರುವುದೇಕೆ?ರಾಜಕಾರಣಿಗಳುಜಾತಿಯನ್ನು ಮತಗಳಿಸಲು ಬಳಸುತ್ತಿರುವುದೇ ಇವೆಲ್ಲಕ್ಕೂಕಾರಣ. ಅವರಜಾತಿಯೇ ಹಾಗಲ್ಲವೇ?

ಹೀಗೆ ಯೋಚಿಸಿದಷ್ಟೂ ಜಾತಿಯ ಸಮಸ್ಯೆಜಟಿಲವಾಗುತ್ತದೆ. ಸರ್ಕಾರವೇ ಕೆಲವು ಜಾತಿಗಳಿಗೆ ಮಾತ್ರ ಮೀಸಲಾತಿ ನೀಡಿದಾಗ ಬೇರೆಜಾತಿಯವರಲ್ಲಿದ್ವೇಷ ಬರುವುದು ಸ್ವಾಭಾವಿಕ.ಜಾತಿಗೂ ಮತ್ತುಆಹಾರ ಪದ್ಧತಿಗೂ ನಂಟಿರುವುದರಿಂದಜಾತಿಪದ್ಧತಿಯನ್ನು ಹೋಗಲಾಡಿಸುವುದು ಸಾಧ್ಯವಿಲ್ಲ. ಆದರೂಎಲ್ಲಾಜಾತಿಯವರೂ ಮಾನವರಾದರೆ ಸಾಕಲ್ಲವೇ?

ಅಂದಹಾಗೆ ಕೇಳುವುದನ್ನು ಮರೆತೆ.ನಿಮ್ಮಜಾತಿಯಾವುದು?

ಸತೀಶ್ ಮಂಚಾಲೆ
ಆಂಗ್ಲ ಭಾಷಾಉಪನ್ಯಾಸಕ